## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2020-21ನೇ ಸಾಲಿನ ಆಯವ್ಯಯದಲ್ಲಿ ಘೋಷಣೆಯಾಗಿರುವ ರೈತಸಿರಿ ಯೋಜನೆಯ ಹೊಸ ಘಟಕ ಕಾರ್ಯಕ್ರಮ ಅನುಷ್ಠಾನದ ಬಗ್ಗೆ.

ಓದಲಾಗಿದೆ:
1. 2020-21 ನೇ ಸಾಲಿನ ಆಯವ್ಯಯ ಘೋಷಣೆ ಕಂಡಿಕೆ: 30.
2. ಕೃಷಿ ಆಯುಕ್ತರ ಪ್ರಸ್ತಾವನೆ ಸಂಖ್ಯೆ: ಪಿಎಲ್‌ಎನ್/ತಾಂ-1/ ಆಯವ್ಯಯ ಘೋ/ 2020-21, ದಿನಾಂಕ:23-03-2020 ಮತ್ತು 07-05-2020.

**ಪ್ರಸ್ತಾವನೆ:**

ಮೇಲೆ ಕ್ರಮಾಂಕ (1) ರಲ್ಲಿ ಓದಲಾದ 2020-21 ರ ಆಯವ್ಯಯ ಭಾಷಣದ ಕಂಡಿಕೆ:30 ರಲ್ಲಿ ರಾಜ್ಯದಲ್ಲಿ ಬರ ನಿರೋಧಕ ಬೆಳೆಗಳನ್ನು ಪ್ರೋತ್ಸಾಹಿಸಲು 'ರೈತ ಸಿರಿ' ಯೋಜನೆಯನ್ನು ಈಗಾಗಲೇ ಘೋಷಿಸಲಾಗಿದೆ. ಈ ಯೋಜನೆಯಡಿ ಪ್ರಮುಖ ಸಿರಿಧಾನ್ಯಗಳಾದ ಊದಲು, ನವಣೆ, ಹಾರಕ, ಕೊರಲೆ, ಸಾಮೆ ಮತ್ತು ಬರಗು ಬೆಳೆಗಳನ್ನು ಬೆಳೆಯಲು ಪ್ರತಿ ಹೆಕ್ಟೇರ್ ಗೆ ರೂ.10,000/- ಗಳಂತೆ ಗರಿಷ್ಠ ರೂ.20,000/-ಗಳ ಪ್ರೋತ್ಸಾಹ ಧನವನ್ನು ನೀಡಲಾಗುತ್ತಿದೆ. ಈ ಯೋಜನೆಯನ್ನು ವಿಸ್ತರಿಸಿ 2020-21ನೇ ಸಾಲಿನಲ್ಲಿ ಟೆಫ್, ಚಿಯಾ ಮತ್ತು ಕ್ವಿನೋವಾ ಸಿರಿಧಾನ್ಯಗಳನ್ನು ಸೇರ್ಪಡೆ ಮಾಡಲಾಗುವುದು ಎಂದು ಘೋಷಿಸಲಾಗಿದೆ.

ಮೇಲೆ ಕ್ರಮಾಂಕ (2) ರಲ್ಲಿ ಓದಲಾದ ಪ್ರಸ್ತಾವನೆಯಲ್ಲಿ ಚಿಯಾ, ಟೆಫ್ ಮತ್ತು ಕ್ವಿನೋವಾ ಬೆಳೆಗಳನ್ನು ಮೈಸೂರಿನ ಕೇಂದ್ರಿಯ ಆಹಾರ ತಾಂತ್ರಿಕ ಸಂಶೋಧನಾಲಯ (Central Food Techonological Reserch Institute - CFTRI) ಸಂಸ್ಥೆಯ ಮುಖಾಂತರ ಮೊಟ್ಟ ಮೊದಲ ಬಾರಿಗೆ ರಾಜ್ಯದಲ್ಲಿ ಪರಿಚಯಿಸಿದ್ದು, ಪ್ರಯೋಗಾತ್ಮಕವಾಗಿ CFTRI ಸಂಸ್ಥೆಯಿಂದ ಆರಂಭಗೊಂಡಿರುವ ಕಾರಣ ಪ್ರಸ್ತುತ CFTRI ಸಂಸ್ಥೆಯ ಮುಖಾಂತರವೇ ತಾಂತ್ರಿಕ ಕೌಶಲ್ಯ ಅಭಿವೃದ್ಧಿಯನ್ನು ಒದಗಿಸುವುದು ಸಮಂಜಸವಾಗಿರುತ್ತದೆ. 2020-21 ನೇ ಸಾಲಿನಲ್ಲಿ ಸಾವಯವ ಕೃಷಿ ಮತ್ತು ಸಿರಿಧಾನ್ಯಗಳು ಯೋಜನೆಯಡಿ (ಲೆ.ಶೀ.2401-00-104-0-12) ರೈತಸಿರಿ ಕಾರ್ಯಕ್ರಮಕ್ಕೆ ಒದಗಿಸಿರುವ ಅನುದಾನದಿಂದಲೇ ಸದರಿ ಹೊಸ ಘಟಕವನ್ನು ಅನುಷ್ಠಾನ ಮಾಡಲಾಗುವುದು. ರೈತ ಸಿರಿ ಯೋಜನೆಯಡಿ ಈಗಾಗಲೇ ಪ್ರಮುಖ ಸಿರಿಧಾನ್ಯಗಳಾದ ಊದಲು , ನವಣೆ, ಹಾರಕ , ಕೊರಲೆ , ಸಾಮೆ ಮತ್ತು ಬರಗು ಬೆಳಗಳನ್ನು ಬೆಳೆಯಲು ಸಹಾಯಧನವನ್ನು ನೀಡಲಾಗುತ್ತಿದ್ದು, ಇದನ್ನು ಚಿಯಾ , ಟೆಫ್ ಮತ್ತು ಕ್ವಿನೋವಾ ಬೆಳೆಗಳಿಗೂ ಸಹ ಪ್ರಸಕ್ತ ಸಾಲಿನಲ್ಲಿ ವಿಸ್ತರಿಸುವುದರಿಂದ ಮತ್ತು ಚಿಯಾ, ಟೆಫ್ ಮತ್ತು ಕ್ವಿನೋವಾ ದರಗಳು ಸಿರಿಧಾನ್ಯಗಳಿಗಿಂತ ಹೆಚ್ಚು ಇರುವುದರಿಂದ ರೈತರಿಗೆ ಹೆಚ್ಚಿನ ಆದಾಯ ದೊರೆಯುತ್ತದೆ. ಆದ್ದರಿಂದ ಸದರಿ ಘಟಕದ ಅನುಷ್ಠಾನಕ್ಕೆ ಈಗಾಗಲೇ ಯೋಜನೆಯಡಿ ಒದಗಿಸಿರುವ ಅನುದಾನದಿಂದಲೇ ವೆಚ್ಚ ಭರಿಸಿ ಅನುಷ್ಠಾನಗೊಳಿಸಲು ಅನುಮೋದನೆ ನೀಡುವಂತೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಆಯುಕ್ತರು, ಕೃಷಿ ಇಲಾಖೆ ಇವರು ಸಲ್ಲಿಸಿರುವ ಪ್ರಸ್ತಾವನೆಯನ್ನು ಪರಿಶೀಲಿಸಿ ಸರ್ಕಾರವು 2020-21ನೇ ಸಾಲಿನ ಆಯವ್ಯಯದಲ್ಲಿ ಘೋಷಣೆಯಾಗಿರುವ ಕೃಷಿ ಇಲಾಖೆಯ ರೈತಸಿರಿ ಯೋಜನೆಯ ಹೊಸ ಘಟಕ ಕಾರ್ಯಕ್ರಮ ಅನುಷ್ಠಾನ ಮಾಡಲು ಅನುಮೋದನೆ ನೀಡಲು ನಿರ್ಧರಿಸಿದೆ. ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: AGRI-AML/92/2020, ಬೆಂಗಳೂರು, ದಿನಾಂಕ:05-10-2020.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ರೈತ ಸಿರಿ ಯೋಜನೆಯಡಿ ಈಗಾಗಲೇ ಪ್ರಮುಖ ಸಿರಿಧಾನ್ಯಗಳಾದ ಊದಲು, ನವಣೆ, ಹಾರಕ , ಕೊರಲೆ, ಸಾಮೆ ಮತ್ತು ಬರಗು ಬೆಳೆಗಳನ್ನು ಬೆಳೆಯಲು ನೀಡಲಾಗುತ್ತಿರುವ ಸಹಾಯಧನವನ್ನು (ಪ್ರತಿ ಹೆಕ್ಟೇರ್‌ಗೆ ರೂ.10000/- ರಂತೆ ಗರಿಷ್ಠ 2 ಹೆಕ್ಟೇರ್ ಗೆ ಸೀಮಿತಗೊಳಿಸಿ) 2020-21 ನೇ ಸಾಲಿನಿಂದ ಚಿಯಾ , ಟೆಫ್ ಮತ್ತು ಕ್ವಿನೋವಾ ಬೆಳೆಗಳಿಗೂ ನೀಡಲು ಮಂಜೂರಾತಿ ನೀಡಿದೆ. ಈ ಅನುದಾನವನ್ನು ಸಾವಯವ ಕೃಷಿ ಮತ್ತು ಸಿರಿಧಾನ್ಯಗಳು ಯೋಜನೆಯಡಿ (ಲೆ.ಶೀ.2401-00-104-0-12) ರೈತಸಿರಿ ಕಾರ್ಯಕ್ರಮಕ್ಕೆ ಒದಗಿಸಿರುವ ರೂ.500.00 ಲಕ್ಷ (ಐದು ನೂರು ಲಕ್ಷಗಳು ಮಾತ್ರ) ಅನುದಾನದಿಂದಲೇ ಭರಿಸಲು ಅನುಮೋದನೆ ನೀಡಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 187 ವೆಚ್ಚ-4/2020, ದಿನಾಂಕ: 08-06-2020 ಮತ್ತು ಯೋಜನಾ ಇಲಾಖೆ ಟಿಪ್ಪಣಿ ಸಂಖ್ಯೆ: ಪಿಡಿಎಸ್ 06 ಎಫ್‌ಪಿಒ 2020, ದಿನಾಂಕ:03-06-2020 ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

P. Sat... 5/10/2020
(ಪಿ.ಸತ್ಯಭಾಮ)
ಸರ್ಕಾರದ ಅಧೀನ ಕಾರ್ಯದರ್ಶಿ
ಕೃಷಿ ಇಲಾಖೆ (ಯೋಜನೆ).

ಗೆ,

1. ಪ್ರಧಾನ ಮಹಾಲೇಖಪಾಲರು, (ಜಿ & ಎಸ್ ಎಸ್ ಎ), ಕರ್ನಾಟಕ ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂ: 5398, ಬೆಂಗಳೂರು-560001.
2. ಪ್ರಧಾನ ಮಹಾಲೇಖಪಾಲರು, (ಇ & ಆರ್ ಎಸ್ ಎ), ಕರ್ನಾಟಕ ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂ: 5398, ಬೆಂಗಳೂರು-560001.

3. ಮಹಾಲೇಖಪಾಲರು (ಎ ಮತ್ತು ಇ) ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ: 5329, ಬೆಂಗಳೂರು-560001
4. ಕೃಷಿ ಆಯುಕ್ತರು / ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ಬೆಂಗಳೂರು.
5. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-4), ವಿಧಾನಸೌಧ, ಬೆಂಗಳೂರು.
6. ನಿರ್ದೇಶಕರು, ಪರಿಯೋಜನಾ ರಚನಾ ವಿಭಾಗ, ಯೋಜನೆ ಕಾರ್ಯಕ್ರಮ, ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬೆಂಗಳೂರು.
7. ಶಾಖಾ ರಕ್ಷಾ ಕಡತ, ಹೆಚ್ಚುವರಿ ಪ್ರತಿಗಳು.

**ಪ್ರತಿ ಮಾಹಿತಿಗಾಗಿ:-**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕೃಷಿ ಇಲಾಖೆ.
2. ಸರ್ಕಾರದ ಉಪ ಕಾರ್ಯದರ್ಶಿ ಹಾಗೂ ಆಂತರಿಕ ಆರ್ಥಿಕ ಸಲಹೆಗಾರರು, ಕೃಷಿ ಇಲಾಖೆ, ಇವರ ಆಪ್ತ ಶಾಖೆ.
3. ಸರ್ಕಾರದ ಉಪ ಕಾರ್ಯದರ್ಶಿ 2, ಕೃಷಿ ಇಲಾಖೆ ಇವರ ಆಪ್ತ ಶಾಖೆ.
4. ಸರ್ಕಾರದ ಅಧೀನ ಕಾರ್ಯದರ್ಶಿ, ಕೃಷಿ ಇಲಾಖೆ ( ಯೋಜನೆ, ಸೇವೆಗಳು & ಸಮನ್ವಯ).
5. ತಾಂತ್ರಿಕ ಅಧಿಕಾರಿಗಳು, ಕೃಷಿ ಯೋಜನೆ ಎ ಶಾಖೆ, ಕೃಷಿ ಇಲಾಖೆ.

***